ದಿಃ **23-08-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು 6 ನೇ ಪ್ರತಿವಾದಿ ಪರ ಃ ಶ್ರೀ ಪಿ ಎಸ್. ವಕೀಲರಿಂದಃ**

1 ರಿಂದ 5 ನೇ ಪ್ರತಿವಾದಿಯರು ನನಗೆ ಸಂಬಂದಿಕರು ಎಂದು ತೋರಿಸಲು ನಾನು ಯಾವುದೇ ದಾಖಲೆಗಳನು ಹಾಜರುಪಡಿಸಿರುವುದಿಲ್ಲ. ಪ್ರತಿವಾದಿ 1 ಆಂಜೆನೆಯ ಮತು 3(ಬಿ) ಬಡೆಪ್ಪ ಇವರು 1993 ರಲ್ಲಿ ದಾವ ಆಸ್ತಿಗಳನ್ನು ತಮ್ಮ ಹೆಸರಿಗೆ ನೊಂದಾಯಿಸಿಕೊಳ್ಳುವ ಸಮಯದಲ್ಲಿ ನಾನು ತಕರಾರು ಮಾಡಿರಲ್ಲಿಲ್ಲ. ಸಾಕ್ಷಿ ಸದರಿ ವಿಷಯ ತನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ದಾವ ಆಸ್ತಿಯನ್ನ 2009 ರಲ್ಲಿ ಮಾರಾಟ ಮಾಡಿದ ಸಮಯದಲ್ಲಿ ನೀವು ತಕರಾರು ಮಾಡಿದಿರಾ ಎಂಬ ಪ್ರಶ್ನೆ ಗೆ ಸಾಕ್ಷಿ ತಕರಾರುಮಾಡಿಲ್ಲ ಸದರಿ ವಿಷಯ ತನಗೆ ಗೊತ್ತಿರಲ್ಲಿಲ ಎಂದು ನುಡಿಯುತ್ತಾರೆ. ಗೊತ್ತಾದ ನಂತರ ಆಂಜಿನೇಯ ವಿರುದ್ದ ಈ ದಾವೆ ದಾಖಲಿಸಿರುವುದಾಗಿ ನುಡಿಯುತ್ತಾರೆ . ದಾವೆ ದಾಖಲಿಸಿದ ನಂತರ ನಾನು ದಾವ ಆಸ್ತಿ ಗೆ ಹೊಗಿದೆ ಎಂದರೆ ಸರಿಯಲ್ಲ. ನನ್ನ ತಂದೆ ದಾವ ಆಸ್ತಿ ಇದ್ದ ಬಗೆ ನನಗೆ ಹೇಳಿರುತ್ತಾರೆ. ನಾನು ದಾವ ಆಸ್ತಿಗೆ ಹೋಗಿ ನೊಡಿದಾಗ ಅಲ್ಲಿ ನಿವೇಶನಗಳು ಆಗಿದ್ದವು. ದಾವೆ ದಾಖಲಿಸುವ ಮುಂಚೆ ನಾನು ದಾವ ಆಸ್ತಿಯನು ನೋಡಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೇಳಿದ್ದರಿಂದ ಮುಂದೂಡಲಾಯಿತು.**

ಓದಿ ಹೇಳಿ ಸಹಿಪಡೆಯಲಾಗಿದೆ

3ನೇ ಹೆಚ್ಚುವರಿ ಹಿರಿಯ ಮತ್ತು ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ರಾಯಚೂರು.